ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
★ ಪ್ರೀತಿ ನಮ್ಮ ಸ್ವಭಾವ.
★ ಮೌನ ನಮ್ಮ ಭಾಷೆ.
★ ಧ್ಯಾನ ನಮ್ಮ ಮಾರ್ಗ.
★ ಈ ಪ್ರಪಂಚ ನಮ್ಮ ಆಶ್ರಮ.
★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

# ತಪೋವಾಣಿ

ಸಂ. 6 ಸಂ. 9 ಆಗಸ್ಟ್ 2009 ರೂ.15

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಏಸುಕ್ರಿಸ್ತ ಮತ್ತು ರಾಮಕೃಷ್ಣ ಪರಮಹಂಸರ ಕಾಲದಲ್ಲಿ ಜನ್ಮತಳೆದು, ಅವರೊಂದಿಗೆ ಕೆಲಸಮಾಡಿದ ಕೆಲವು ಜನರ ಬಗ್ಗೆ ಋಷಿಗಳು ಮಾಹಿತಿ ನೀಡಿದಾಗ, ಎಲ್ಲರೂ ಭಾವೋದ್ರಿಕ್ತರಾದರು. ಅವರೆಲ್ಲ ಮತ್ತೆ ಜನ್ಮತಳೆದಿದ್ದಾರೆ. ಮಾನಸ ಕುಟುಂಬದಲ್ಲೇ ಇದ್ದಾರೆ. ಅವರಲ್ಲಿ ಕೆಲವರು ನನ್ನೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದರೆ, ಇನ್ನು ಕೆಲವರು ದೂರದಲ್ಲಿದ್ದು ಕೆಲಸಮಾಡುತ್ತಿದ್ದಾರೆ. ಈ ಹೊಸ-ಅರಿವು ನಿಸ್ಸಂದೇಹವಾಗಿ ಕುತೂಹಲ ಕೆರಳಿಸಿದೆ. ಆದರೆ ವಾಸ್ತವತೆ ಹೆಚ್ಚು ಮುಖ್ಯವಾದುದು. ಈ ಅಧ್ಯಾತ್ಮ ಕಾರ್ಯಕರ್ತರು ಈಗ ಸಾಮಾನ್ಯ ಮನುಷ್ಯರಂತೆ ಜೀವನ ಮಾಡುತ್ತಿದ್ದಾರೆ. ತಾವೇ ಆಯ್ಕೆಮಾಡಿಕೊಂಡ ಜಾಲದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ತಾವು ಹೇಗಿರಬೇಕೆಂದು ಆಯ್ಕೆಮಾಡಿಕೊಂಡಿದ್ದರೋ ಹಾಗೇ ಅವರಿದ್ದಾರೆ. ಪ್ರಾರಂಭದಲ್ಲಿ ಇದ್ದ ತಂಡ ಈಗ ಪುನಃ ಒಂದುಗೂಡಲು 'ಕರೆ' ಬಂದಿರುವಾಗ, ಅವರು ತಾವೇ ಹೆಣೆದುಕೊಂಡಿರುವ ಬಲೆಗಳಲ್ಲಿ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ!

ಮಾಸ್ಟರ್ 'V' ಹೊಸ ತಂಡವನ್ನು ರೂಪಿಸುತ್ತಿದ್ದಾರೆ. ಈ ತಂಡ ಮುಂದಿನ ಯುಗಗಳಲ್ಲಿ ಕೆಲಸಮಾಡುತ್ತದೆ. ಸಂನ್ಯಾಸಿಯಂತೆ ಯಾರು ಬೇಕಾದರೂ ಈ ತಂಡವನ್ನು ಸೇರಬಹುದು. ಅವರು ಅಕ್ಷರಶಃ ಸಂನ್ಯಾಸಿಯಾಗಿರಬೇಕು!

ಜನರು ಸಾಮಾನ್ಯವಾಗಿ ಅತಿರೇಕದ ಅಭಿಪ್ರಾಯಗಳನ್ನು ನಂಬುತ್ತಾರೆ. ಇದು ದುಃಖಕರ ಸಂಗತಿ. 2012ರ ಬಗ್ಗೆ: ಪ್ರಪಂಚ ಕೊನೆಯಾಗುತ್ತದೆ ಅಥವಾ ಏನೂ ಆಗುವುದಿಲ್ಲ! ಈ ಎರಡೂ ಅಭಿಪ್ರಾಯಗಳು ಸರಿಯಲ್ಲ. ಪ್ರಪಂಚ ಕೊನೆಯಾಗುವುದೂ ಇಲ್ಲ ಅಥವಾ ಪ್ರಪಂಚದ ರೀತಿನೀತಿಗಳು ಬದಲಾಗದೆ ಹಾಗೆಯೇ ಇರುವುದೂ ಇಲ್ಲ. ಮಹತ್ತರವಾದ ಬದಲಾವಣೆಗಳು ಆಗುತ್ತವೆ ಎಂದು ನಾನು ಹೇಳುತ್ತಲೇ ಇದ್ದೇನೆ. ಆ ಬದಲಾವಣೆಗಳು ನಮ್ಮನ್ನು ಬದುಕಿನ ಮುಂದಿನ ಸ್ತರಕ್ಕೆ ವರ್ಗಾಯಿಸುತ್ತವೆ. ಆ ಸ್ತರ ಪ್ರೀತಿ ಮತ್ತು ಬೆಳಕುಗಳ ವಾತಾವರಣದಿಂದ ತುಂಬಿದೆ. ಪ್ರೀತಿ ಮತ್ತು ಬೆಳಕುಗಳು ನಮ್ಮ ನಿಜವಾದ ಗುಣಗಳು. ನಾವು ಸ್ವತಃ ಬದಲಾಗಲು ನಿರ್ಧರಿಸಿದರೆ, ಯಾವುದೇ ನೋವು ಇರುವುದಿಲ್ಲ. ಬದಲಾವಣೆಯನ್ನು ನಿರೋಧಿಸಿದರೆ, ನೋವನ್ನು ಅನುಭವಿಸಬೇಕಾಗುತ್ತದೆ. ನೋವು ಅಥವಾ ನಲಿವನ್ನು ಆಯ್ಕೆಮಾಡುವವರು ನಾವೇ. ನಾವು ಮಾಡುವ ಆಯ್ಕೆಯಿಂದ ನಮ್ಮ ಭವಿಷ್ಯವನ್ನು ನಾವು ಸೃಷ್ಟಿಸುತ್ತೇವೆ.

ಅಂತ್ಯ ಅಥವಾ ಆರಂಭವನ್ನು ಸೃಷ್ಟಿಸುವವರು ನಾವೇ.

ಕೆಲವೇ ವಾರಗಳಲ್ಲಿ ನಾನು ಬೆಳೆದಿದ್ದೇನೆ!

ಇದು ನಂಬಲಾಗದ ಮಾತೆಂದು ನನಗೆ ಗೊತ್ತು. ಆದರೆ ಯಾವಾಗಲಾದರೊಮ್ಮೆ ನಮ್ಮನ್ನು ನಾವೇ ಹೊಗಳಿಕೊಳ್ಳೋಣ! ಹೊಸ ಹೊಸ ಮತ್ತು ನೋವಿನಿಂದ ತುಂಬಿದ ಕಲಿಕೆಯ ಅನುಭವಗಳ ಸರಮಾಲೆಗಳು ನನ್ನ ಪಾಲಿಗೆ ಬಂದವು. ನೋವು, ಜೀವನದ ಪಾಠಗಳನ್ನು ಬಹಳ ಬೇಗ ಕಲಿಸುತ್ತದೆ. ವಿಚಿತ್ರವೆಂಬಂತೆ, ಬಹಳಷ್ಟು ಪಾಠಗಳನ್ನು ನಾನು ನೋವಿನಿಂದ ಕಲಿತೆ. ನೋವು ಉಂಟಾದುದಕ್ಕಾಗಿ ನಾನು ವಿಷಾದಿಸುವುದಿಲ್ಲ. ನೋವು, ಜೀವನದ ಒಂದು ಭಾಗ.

ಒಂದು ಸಾರಿ, ಅಮರರವರು ನನಗೆ ಹೀಗೆ ಹೇಳಿದರು, "ಅಧ್ಯಾತ್ಮಿಕತೆಯಡಿಯಲ್ಲಿ ಆಶ್ರಯ ತೆಗೆದುಕೊಂಡು ನೋವನ್ನು ಎದುರಿಸು." ಅವರು ನಾನು ಎದುರಿಸಬೇಕಾದುದೆಲ್ಲವನ್ನೂ ತೆರೆದು ತೋರಿಸಿ, ನನ್ನತ್ತ ನೋಡಿ ಮುಗುಳ್ನಕ್ಕರು. ಅವರ ಮುಗುಳ್ನಗು ಮತ್ತು ಕೃಪೆ ನನ್ನ ಆಶ್ರಯ ತಾಣಗಳಾದವು. ಜೀವನ ಕಂಬನಿಯಿಂದ ತುಂಬಿದ್ದರೂ, ನಾನು ಮುಗುಳ್ನಗೆಯೊಂದಿಗೆ ಅದರಲ್ಲಿ ಈಜಿ ಯಶಸ್ವಿಯಾದೆ. ಕಣ್ಣೀರು ಮುಖ್ಯವಲ್ಲ. ಪಾಠಗಳು ಮುಖ್ಯ. ❑

ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫ಼ೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



ಅಂತರ್–ವನದಲ್ಲಿ ನಿರ್ಮಾಣವಾಗುತ್ತಿರುವ ಬೆಳಕಿನ ಮಂದಿರ

## ಸುದ್ದಿ–ಸೂಚನೆ

- 7–7–2009ರ ಗುರುಪೂರ್ಣಿಮಾ ದಿನದಂದು ಮಾನಸದ ಧ್ಯಾನಿಗಳು ತಪೋನಗರದಲ್ಲಿ ಒಟ್ಟುಗೂಡಿ ಪರಬ್ರಹ್ಮನನ್ನು ಚೈತನ್ಯಗಳನ್ನು ಅರ್ಪಿಸುವುದರ ಮುಖಾಂತರ ಪೂಜಿಸಿದರು ಮತ್ತು ಧ್ಯಾನ ಮಾಡಿದರು. ಅದೇ ದಿನ ಗ್ರಹಣ ಸಮಯದಲ್ಲಿಯೂ ಸಹ ಧ್ಯಾನ ಮಾಡಿದರು.
- ಬೆಳಕಿನ ಮಂದಿರ (ಪ್ರಕಾಶ ಬ್ರಹ್ಮ), 25–08–2009 ರಂದು ಅಂತರ್–ವನದಲ್ಲಿ ಉದ್ಘಾಟನೆಯಾಗಲಿದೆ.
- "Light" ಪುಸ್ತಕದ ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಮರಾಠಿ ಅನುವಾದಗಳು, "2012-End or Beginning" ಪುಸ್ತಕದ ಕನ್ನಡ, ತೆಲಗು, ತಮಿಳು ಮತ್ತು ಮರಾಠಿ ಅನುವಾದಗಳು, ಮತ್ತು ಹಿಂದಿ ಅನುವಾದಿತ "ಧ್ಯಾನಯೋಗ" ಪುಸ್ತಕ, 30–08–2009ರ 'ಅಮರ ಮಹಾಸಮಾಧಿ ದಿನ'ದಂದು ಬಿಡುಗಡೆಯಾಗಲಿವೆ.

## ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 05 | ಬುಧ | ಪೂರ್ಣಿಮಾ |
| 06 | ಗುರು | ಚಂದ್ರಗ್ರಹಣ ಬೆಳಗಿನ ಜಾವ 4.31ರಿಂದ ಬೆಳಿಗ್ಗೆ 7.48 |
| 13 | ಗುರು | ಶ್ರೀ ಕೃಷ್ಣ ಜನ್ಮಾಷ್ಟಮಿ |
| 18 | ಮಂಗಳ | ಮಾಸ ಶಿವರಾತ್ರಿ |
| 20 | ಗುರು | ಅಮಾವಾಸ್ಯೆ |
| 23 | ಭಾನ | ಗೌರೀದೇವಿ ಮತ್ತು ಗಣೇಶ ಪೂಜೆ |
| 25 | ಮಂಗಳ | ಅಮರ ಮಹಾಸಮಾಧಿ ದಿನ |
| 28 | ಶುಕ್ರ | ಶುಕ್ಲ ಅಷ್ಟಮಿ |
| 30 | ಭಾನು | ಶುಕ್ಲ ದಶಮಿ |

## ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 07–06–09 | ನಾಗೇಂದ್ರ ಪ್ರಸಾದ್ ಮತ್ತು ಉಷಾ ಕುಮಾರಿ |
| 14–06–09 | ರಾಮಚಂದ್ರಾಚಾರ್ ಮತ್ತು ರಾಜಾ ತೆಂಡುಲ್‌ಕರ್ |
| 21–06–09 | ಜಯಶ್ರೀ ಎಮ್.ವಿ. ಮತ್ತು ಸುಬ್ಬಯ್ಯ ಟಿ |
| 28–06–09 | ನಿಹಾರ್, ವನಜಾಕ್ಷಿ ಮತ್ತು ಮುಂಬೈನ ಒಬ್ಬ ಹಿತೈಷಿ |

## ಅಮರರವರ ಪುಣ್ಯತಿಥಿ
### ಕಾರ್ಯಕ್ರಮ
### 30–08–2009, ಭಾನುವಾರ

| | |
|---|---|
| ಬೆಳಿಗ್ಗೆ 11ಕ್ಕೆ | ಓಂಕಾರ |
| | ಸ್ವಾಗತ |
| | ಭಾಷಣಗಳು |
| | ಗುರುಜಿಯವರಿಂದ ಸಂದೇಶ |
| | ಪುಸ್ತಕಗಳ ಬಿಡುಗಡೆ |
| | ವಿಶೇಷ ಧ್ಯಾನ |
| | ಓಂಕಾರ |
| | ಗುರೂಜಿಯವರಿಂದ ಆಶೀರ್ವಾದಗಳು |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

## ಈ ತಿಂಗಳು ತಪೋನಗರದಲ್ಲಿ

| | |
|---|---|
| ಭಾನುವಾರಗಳು | ಉಪನ್ಯಾಸಗಳು ಬೆಳಿಗ್ಗೆ 11 ರಿಂದ 12ರವರೆಗೆ ವಿಶೇಷ ಧ್ಯಾನ: ಮಧ್ಯಾಹ್ನ 12 ರಿಂದ 1ರವರೆಗೆ |
| ಶುಕ್ರವಾರಗಳು | ಲೈಟ್ ಚಾನಲ್: ಬೆಳಿಗ್ಗೆ 10 ರಿಂದ 1 ರವರೆಗೆ |
| ಆಗಸ್ಟ್ 13 | ಶ್ರೀಕೃಷ್ಣಜನ್ಮಾಷ್ಟಮಿ ವಿಶೇಷ ಧ್ಯಾನ ಮಧ್ಯಾಹ್ನ 12ರಿಂದ 1ರವರೆಗೆ |
| ಆಗಸ್ಟ್ 25 | ಅಂತರ್ ವನದಲ್ಲಿ ಬೆಳಕಿನ ಮಂದಿರದ ಉದ್ಘಾಟನೆ ಮತ್ತು ವಿಶೇಷ ಧ್ಯಾನ. |
| ಆಗಸ್ಟ್ 30 | ಅಮರರವರ ಮಹಾಸಮಾಧಿ ದಿನದ ಆಚರಣೆ. |

**ಭಜನ್ CD ಗಳು 30–08–2009 ರಿಂದ ದೊರೆಯುತ್ತವೆ.**

ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು
ಋಷಿಕ್. ಆರ್

"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಮಹರ್ಷಿ ಅಮರ

**ಜಯಂತ್ ದೇಶ್‌ಪಾಂಡೆ; ಅನು: ಕೆ.ರಾಮಚಂದ್ರ**

ಅಮರರವರ ಅತೀಂದ್ರಿಯ ಸಾಹಸಗಳು ನಮಗೆ ಅತೀಂದ್ರಿಯ ಸತ್ಯಗಳನ್ನು ತಿಳಿಯಲು ಹಾಗೂ ಹೆಚ್ಚು ಪ್ರಯತ್ನಮಾಡಲು ಪ್ರೇರೇಪಿಸುತ್ತವೆ. ಅವರ ಜೀವನದ ಮಾನುಷ ಮಟ್ಟದ ವಿಚಾರಗಳು ಈ ಜೀವನವನ್ನು ನಾವು ಸಂಪೂರ್ಣ ಮಾನವಜೀವಿಯಾಗಿ ಬದುಕಲು ಪ್ರೇರೇಪಿಸುತ್ತವೆ. ಅವರು ಜೀವನದ ಎಲ್ಲ ವಿಚಾರಗಳಲ್ಲಿ ಪರಿಪೂರ್ಣವಾಗಿ ಬದುಕಿದರು. ಸಾಮಾನ್ಯರಿಗೆ, ಅವರ ಜೀವನ "ಅಧ್ಯಾತ್ಮವು ಎಲ್ಲರಿಗೂ ಕೈಗೆಟಕುವ ವಿಚಾರ" ಎನ್ನುವ ಭರವಸೆಯನ್ನು ತರುತ್ತದೆ. ಅವರು ಅಧ್ಯಾತ್ಮಿಕತೆಗೆ ಒಂದು ಹೊಸ ಅರ್ಥವನ್ನು ಕೊಟ್ಟರು. ಹಾಗಾಗಿ ಆ ವಿಚಾರದಲ್ಲಿ ಅವರೊಬ್ಬ ಕ್ರಾಂತಿಪುರುಷರು.

ಅಮರರವರು, "ಅಹಂಕಾರವನ್ನು ಬಿಡಿ, ನೀವು ದೇವರೊಂದಿಗಿರುತ್ತೀರಿ" ಎಂದು ಹೇಳಿದರು. ಈ ಪದಗಳು ಬಹಳ ಸಾಧಾರಣ ಎನ್ನಿಸಿ ನಾವು ಅದನ್ನು ಅರ್ಥವಾಗದ ಪದಗಳಲ್ಲಿ ವಿಶ್ಲೇಷಿಸಲು ಪ್ರಯತ್ನಿಸುತ್ತೇವೆ. ಆದರೆ ಅವರು ಇಂತಹ ವಿವರಣೆಗಳನ್ನು ಕೈಬಿಡುತ್ತಿದ್ದರು. ಒಮ್ಮೆ ಅವರನ್ನು ದೇವರಿಗೆ ಶರಣಾಗಲು ಎಷ್ಟು ಸಮಯ ಬೇಕು ಎಂದು ಕೇಳಿದಾಗ "ಕೇವಲ ಒಂದು ಕ್ಷಣ ಸಾಕು", ಎಂದು ತಿಳಿಸಿದರು. ನಾವು ಹಲವು ಜನ್ಮಗಳಲ್ಲಿ ಹೆಣಗಾಡಿ ಕೊನೆಗೆ ಈ ಅಹಂಕಾರವನ್ನು ತ್ಯಜಿಸಲು ಅಥವಾ ಶರಣಾಗಲು ಕೇವಲ ಒಂದು ಕ್ಷಣ ಸಾಕು ಎಂದು ಅರಿಯುತ್ತೇವೆ.

ಅಮರರವರು ದೇವರುಗಳ ಜೊತೆ ಯಾವ ಕಷ್ಟವಿಲ್ಲದೇ ಸರಾಗವಾಗಿ ಮಾತನಾಡಬಲ್ಲವರಾಗಿದ್ದರು ಮತ್ತು ಜನಗಳ ಜೊತೆ ಮಾತನಾಡಿದಾಗ ಅಮರರವರು ತಮ್ಮಲ್ಲೊಬ್ಬರು ಎನ್ನುವ ಭಾವನೆ ಇತರರಲ್ಲಿ ಮೂಡುವಂತೆ ಮಾಡುತ್ತಿದ್ದರು. ಒಮ್ಮೆ ಪೂಜಾರಿಯೊಬ್ಬರು ಗಣೇಶನ ಬಗ್ಗೆ ಬಹಳ ಹೊತ್ತು ಅವರ ಹತ್ತಿರ ಹೇಳುತ್ತಿದ್ದರು. ಅಮರರವರು ಅವರನ್ನು ಮಧ್ಯದಲ್ಲಿ ತಡೆಯದೇ ಕೈಮುಗಿದುಕೊಂಡು ತಾಳ್ಮೆಯಿಂದ ಕೇಳುತ್ತಿದ್ದರು. ಇದು ಅವರಲ್ಲಿದ್ದ ವಿನಯವನ್ನು ತೋರಿಸುತ್ತದೆ.

ಒಮ್ಮೆ ಗುರೂಜಿಯವರ ಮಗ ಅವರನ್ನು ನೋಡಲು ಹೋದಾಗ ಅಮರರವರು ತಮ್ಮ ಕುರ್ಚಿಯಿಂದ ಎದ್ದು ಅವನಿಗೆ ಅಭಿವಂದಿಸಿದರು. ಚಿಕ್ಕ ಹುಡುಗನಿಗೆ ಅವರೇಕೆ ಹೀಗೆ ಮಾಡಿದರು ಎಂದು ನಮಗೆ ಆಶ್ಚರ್ಯವಾಗಬಹುದು. ಅವರು ಎಲ್ಲರಲ್ಲೂ ದೇವರನ್ನು ಕಾಣುವವರಾಗಿದ್ದರು; ಈ ತಿಳುವಳಿಕೆಯ ಫಲವೇ ಅವರು ಎಲ್ಲರನ್ನೂ ಆ ರೀತಿ ಮರ್ಯಾದೆಯಿಂದ ಕಾಣುವುದಕ್ಕೆ ಕಾರಣವಾಗಿತ್ತು. ಅವರು ಎಲ್ಲರನ್ನೂ ಸಮಾನ ಗೌರವದಿಂದ ಕಾಣುತ್ತಿದ್ದರು.

ಈ ರೀತಿಯ ಸೂಕ್ಷ್ಮ ವಿಚಾರಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಈ ಪ್ರಪಂಚ, ಒಂದು ಸುಂದರ ತಾಣವಾಗುತ್ತದೆ. ▫

## ಅಮರ

**ಶೋಭ ಕೆ.ರಾವ್; ಅನು: ಕೆ.ರಾಮಚಂದ್ರ**

ನಮಗೆ ತಿಳಿದಿರುವ ಅತ್ಯಂತ ಪ್ರಿಯವಾದ ವ್ಯಕ್ತಿ ಮತ್ತು ಗುರೂಜಿಯವರು ಪರಿಚಯಿಸಿದ ಒಬ್ಬ ಉನ್ನತ ಮಹರ್ಷಿ "ಅಮರ"ರವರು. ಅಂದಿನಿಂದ ಅವರು ನಮ್ಮ ಹೃದಯದಲ್ಲಿ ನೆಲೆಸಿದ್ದಾರೆ. ತಕ್ಷಣ ಸಿಗುವ ಸಹಾಯಕ್ಕಾಗಿ ಬಹಳಷ್ಟು ಜನರು ಅವರನ್ನು ಅವಲಂಬಿಸಿದ್ದಾರೆ.

ಅಮರರವರು ಅಧ್ಯಾತ್ಮ ವಿಜ್ಞಾನ ಮತ್ತು ಧ್ಯಾನದ ಜ್ಞಾನವನ್ನು ಋಷಿಗಳಿಂದ ನೇರವಾಗಿ ಇಲ್ಲಿಗೆ ತಂದರು. ಹಾಗಾಗಿ ಹೊಸಯುಗದೆಡೆಗೆ ತಲುಪುವ ಈ ಬದಲಾವಣೆಯ ಸಮಯದಲ್ಲಿ ಸೂಕ್ತವಾದ ಜ್ಞಾನ ಮತ್ತು ಚೇತನಗಳನ್ನು ನಮಗೆ ಕೊಡುವ ಋಷಿಗಳ ಈ ಮಾರ್ಗದಲ್ಲಿ ಸಾವಿರಾರು ಜನರು ಇರುವಂತೆ ಮಾಡಿದ್ದಾರೆ.

ಅಮರರವರು ಸೂಕ್ಷ್ಮ ಲೋಕಗಳು ಮತ್ತು ಅಲ್ಲಿಯ ಜೀವನದ ಬಗ್ಗೆ ನಮಗೆ ತಿಳಿಸಿದರು. ಸೂಕ್ಷ್ಮ ಲೋಕಗಳಲ್ಲಿನ ನಮ್ಮದೇ ಅಸ್ತಿತ್ವ ಈ ಭೌತಿಕ ಪ್ರಪಂಚದ ನಮ್ಮ ಜೀವನದ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಚಕಿತಪಡಿಸುವ ಜ್ಞಾನ ಇದೀಗ ನಮ್ಮದಾಗಿದೆ. ಈ ಜ್ಞಾನವನ್ನು ಉಪಯೋಗಿಸಿಕೊಂಡು ಭೌತಿಕ ಮಟ್ಟದ ಈ ಜೀವನವನ್ನು ಹಲವು ವಿಧದಲ್ಲಿ ಸುಧಾರಿಸಬಹುದಾಗಿದೆ.

ಅಮರ ಒಬ್ಬ ಅದ್ಭುತ ಸಂಗೀತಗಾರರೂ ಆಗಿದ್ದರು. ಗುರೂಜಿ ಮತ್ತು ಅಮರರವರಿಂದ ರಚಿತವಾದ ಸುಂದರವಾದ ಹಾಡುಗಳು "ಅರ್ಪಣ" ಸಿ.ಡಿ. ಮುಖಾತರ ಹೊರಹೊಮ್ಮಿ ಈ ಕ್ಷೇತ್ರದಲ್ಲಿ ಅವರ ನೈಪುಣ್ಯತೆಯನ್ನು ಸಾಬೀತುಪಡಿಸಿದೆ. ಸುಮಧುರವಾದ "ಋಷಿ ಕಾರ್ಯಕಿ ಜ್ಯೋತಿ ಸದಾ ಜಲೇ...." ಎನ್ನುವ ಹಾಡಂತೂ ಋಷಿಗಳ ಮೇಲೆ ಅವರಿಗಿರುವ ಗಾಢವಾದ ಪ್ರೀತಿ ಮತ್ತು ಋಷಿಗಳ ಕೆಲಸದ ಮೇಲಿರುವ ಬದ್ಧತೆಯನ್ನು ತಿಳಿಸುತ್ತದೆ. ಅವರೊಬ್ಬ ಶ್ರೇಷ್ಠ ಋಷಿಯಾಗಿದ್ದರೂ "ನಾನೊಬ್ಬ ಋಷಿಗಳ ಕೆಲಸಗಾರ" ಎಂದಷ್ಟೇ ಹೇಳುತ್ತಿದ್ದರು. ಅತಿ ವಿನಯವಂತರಾದ ಅಮರರವರು ಶಿವನೊಡನೆಯಾಗಲೀ ಅಥವಾ ಒಬ್ಬ ಚಿಕ್ಕ ಮಗುವಿನ ಜೊತೆಯಾಗಲೀ ಸಮಾನವಾದ ಗೌರವ ಮತ್ತು ಭಕ್ತಿಯಿಂದ ಸಂಭಾಷಿಸಬಲ್ಲವರಾಗಿದ್ದರು.

ಅವರ ಉಪದೇಶಗಳು ಅತ್ಯಂತ ಸರಳವಾಗಿದ್ದು, ತಾವು ಹೇಳಿದ್ದೆಲ್ಲವನ್ನು ಪಾಲಿಸಿದರು. ಇದು ಅವರ ವಿನಯ ತುಂಬಿದ ಮತ್ತು ಉದಾತ್ತ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತವೆ. ▫

## ಲೈಟ್ ಚಾನಲ್ಸ್

### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಪಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭ ಕೆ. ರಾವ್, ಅನು: ಶಿವಪ್ರಕಾಶ್ ಎಲ್.)

**07–06–2009**

ಅಂತರ್–ವನದ ವೇದಿಕೆಯ ಕೇಂದ್ರ ಸ್ಥಳದಲ್ಲಿ ಕಟ್ಟಲಾಗುತ್ತಿರುವ 'ರಾ ಮಂದಿರ'ದಲ್ಲಿ ಋಷಿಗಳು ಅತ್ಯಂತ ಶಕ್ತಿಯುತವಾದ ಹೊಸ ಚೈತನ್ಯಗಳನ್ನು, ಅಂದರೆ ರಾ ಚೈತನ್ಯಗಳನ್ನು ಮೇ 18 ರಂದು ಪ್ರತಿಷ್ಠಾಪಿಸಿದ್ದಾರೆ. ಈ ಭೂಮಿಯ ಮೇಲೆ ಇದು ಅತ್ಯಂತ ಮುಖ್ಯವಾದ ಕಟ್ಟಡ. ಇದನ್ನು ಆಗಸ್ಟ್ 25, 2009 ರಂದು ತೆರೆಯುತ್ತಿದ್ದೇವೆ. ನೀವು ಇದರೊಳಗೆ ಕುಳಿತು ಹೆಚ್ಚು ಪ್ರಯೋಜನಗಳನ್ನು ಪಡೆಯಬಹುದು. ನಾವು ಈ ಚೈತನ್ಯಗಳೊಂದಿಗೆ ಒಂದು ಸಲ ಅಳವಡಿಸಿಕೊಂಡರೆ ಸಾಕು, ಅವು ಮೊದಲು ನಮ್ಮನ್ನು ತಿದ್ದಲು ಪ್ರಾರಂಭಿಸುತ್ತವೆ. ಶರಣಾಗತಿಗೆ ಮತ್ತು ಸುಲಭವಾಗಿ ಹೊಸ ಯುಗದೆಡೆಗೆ ಸಾಗಲು ಸಹಾಯ ಮಾಡುತ್ತವೆ. 'ರಾ' ಗುಂಪೊಂದನ್ನು ರೂಪಿಸಿ, ಅವರಿಗೆ 2012 ವರ್ಷದೆಡೆಗೆ ಸಾಗಲು ಜನರಿಗೆ ತರಬೇತಿ ಕೊಡುತ್ತೇವೆ.ಯಾವ ತಂತ್ರಗಳ ಅಗತ್ಯವಿಲ್ಲದೆ ಹೊಸ ಹಂತಕ್ಕೆ ನಾವು ಪ್ರವೇಶಿಸುತ್ತಿದ್ದೇವೆ.

ಜೂನ್ 1ರಿಂದ ಮಾನಸ ಮತ್ತು ಇಡೀ ಪ್ರಪಂಚಕ್ಕೆ ಒಂದು ಹೊಸ ಮತ್ತು ಅತ್ಯಂತ ಮುಖ್ಯವಾದ ಹಂತ ಪ್ರಾರಂಭವಾಗಿದೆ. ಹೊಸ ಹಂತಕ್ಕೆ ನಾವು ಪ್ರವೇಶಿಸಿದಾಗಲೆಲ್ಲಾ ಸಹಜ ವಾಗಿಯೇ ಕೆಲವು ಗೊಂದಲಗಳು, ಕೆಲವು ಹೋರಾಟಗಳು ಹೊಸ ಮಾರ್ಗಗಳನ್ನು ಒಪ್ಪಿಕೊಳ್ಳಲು ಅಡ್ಡಿಬರುತ್ತವೆ. ಈ ಅದ್ಭುತವಾದ ಚೈತನ್ಯಗಳನ್ನು ಸ್ವೀಕರಿಸಲು ನಮ್ಮನ್ನು ನಾವು ಸಿದ್ಧಪಡಿಸಿಕೊಳ್ಳುತ್ತ ಸಂತೋಷದಿಂದ ಹೋರಾಡೋಣ. ಇಲ್ಲಿ ಪ್ರತಿಯೊಬ್ಬರನ್ನು ಪರೀಕ್ಷೆಗೆ ಗುರಿಪಡಿಸಲಾಗುತ್ತದೆ. ಅಂತರ್–ವನದಲ್ಲಿ ಅಳವಡಿಸಲಾದ ಚೈತನ್ಯಗಳು 15ನೇ ದಿನಾಂಕದಿಂದ ಇಡೀ ಪ್ರಪಂಚಕ್ಕೆ ಲಭ್ಯವಿರುವುದರಿಂದ ನಾವು ಹೊಸ ಚೈತನ್ಯಗಳನ್ನು ಅಗತ್ಯವಾಗಿ ಪಡೆಯಬೇಕು.

ನಮ್ಮ ಭಾವೋದ್ವೇಗಗಳನ್ನು ಮತ್ತು ಆಲೋಚನೆ ಗಳನ್ನು ಗುಣಾತ್ಮಕವನ್ನಾಗಿ ಮಾಡಿದರೆ, ನಮ್ಮ ಧ್ಯಾನ ಸುಲಭವಾಗುತ್ತದೆ ಮತ್ತು ಇದಕ್ಕೆ ತದ್ವಿರುದ್ಧವೂ ಸಾಧ್ಯ. ನಾವು ಪ್ರಜ್ಞಾಪೂರ್ವಕವಾಗಿ ಧ್ಯಾನದ ಪ್ರಭಾವವನ್ನು ಪಡೆದು ನಮ್ಮ ಮೂಲಕ ಕೆಲಸ ಮಾಡಲು ಬಿಡಬೇಕು. ನಮ್ಮ ಭಾವೋದ್ವೇಗಗಳು ಮತ್ತು ಆಲೋಚನೆಗಳು ವ್ಯಗ್ರವಾಗಿದ್ದರೆ ಅಥವಾ ನಕಾರಾತ್ಮಕವಾಗಿದ್ದರೆ ನಾವು ಧ್ಯಾನ ಮಾಡಲಾಗುವುದಿಲ್ಲ. ಈ ವಿಷಯಗಳನ್ನು ನಾವು ಅರ್ಥಮಾಡಿಕೊಂಡು, ಪರೀಕ್ಷಿಸಿ ಮಾತನಾಡುತ್ತಿದ್ದೇವೆ.

ಈ ವಿಶ್ವದಲ್ಲಿ ಒಂದು ಲಯಬದ್ಧತೆ ಇದೆ. ಇದರೊಂದಿಗೆ ನಮ್ಮ ಶಾರೀರಿಕ ವ್ಯವಸ್ಥೆಯ ಎಲ್ಲ ಮಟ್ಟಗಳಲ್ಲಿ ಒಂದು ಲಯಬದ್ಧತೆಯನ್ನು ಬೆಳೆಸಿಕೊಳ್ಳಬೇಕು. ಈ ಲಯವನ್ನು ಇಡೀ ಗ್ಯಾಲಾಕ್ಸಿಯ ಲಯದೊಂದಿಗೆ ಹೊಂದಿಸಿ ಕೊಳ್ಳಬೇಕು. ಅಲ್ಲದೆ ನಮ್ಮೊಳಗಿರುವ ಬುದ್ಧಿಶಕ್ತಿಯೊಂದಿಗೆ, ಈ ಮಾರ್ಗದಲ್ಲಿ, ಋಷಿಗಳು ಮತ್ತು ಗ್ಯಾಲಾಕ್ಸಿಯೊಳಗಿನ ಬುದ್ಧಿಶಕ್ತಿಯೊಂದಿಗೆ ಹೊಂದಿಸಬೇಕು. ಈ ವಿಚಾರವಾಗಿ ಚಿಂತನೆಮಾಡಿ.

ನಾವು ಒಂದು ವೃತ್ತಿಯನ್ನು ಅಥವಾ ಏನನ್ನಾದರು ಆರಿಸಿಕೊಂಡಾಗ ಒಂದು ಪ್ಯಾಕೇಜನ್ನು ಆರಿಸಿಕೊಂಡಿದ್ದೇವೆಂಬುದನ್ನು ಒಪ್ಪಿ ಕೊಳ್ಳಬೇಕು. ನಾವು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಮಾತ್ರವಲ್ಲ ಇಡೀ ವಿಶ್ವಕ್ಕೆ, ಎಲ್ಲವೂ ಆಗಿರುವ ದೇವರಿಗೆ ನಾವು ವಿನಮ್ರರಾಗಿದ್ದು, ಉನ್ನತ ಪ್ರೇಮ ಹೊಂದಿರಬೇಕು.

ನಾವು ಹೊಸ ಹಂತಕ್ಕೆ ಪ್ರವೇಶಿಸುತ್ತಿದ್ದೇವೆ. ನಾನು ಅಧ್ಯಯನ ಕೇಂದ್ರದಲ್ಲಿ ಒಂದು ಮಹತ್ಕಾರ್ಯ ಕೈಗೊಳ್ಳಲು ಬಯಸಿದ್ದೇನೆ.

**14–06–2009**

ಋಷಿಗಳು ಹೇಳುತ್ತಾರೆ: "ದೇವರು ಪರಿಪೂರ್ಣ ಆದರೆ ಸೃಷ್ಟಿ ಪರಿಪೂರ್ಣವಲ್ಲ". ಇದು ಅತ್ಯಂತ ಮುಖ್ಯವಾದ ಅಂಶ. ಇಲ್ಲಿಯವರೆಗೆ ಯಾರೂ ಈ ಮಾತನ್ನು ಹೇಳಿಲ್ಲ. ಸೃಷ್ಟಿ ಇನ್ನೂ ಪೂರ್ಣವಾಗಿಲ್ಲ. ಪ್ರಯೋಗ ಇನ್ನೂ ನಡೆಯುತ್ತಿದೆ. ನೋವು ಅಥವಾ ನರಳಾಟವಿಲ್ಲದ ಭೂಮಿಗಳು ಇವೆ. ಆದರೆ ನಾವಿನ್ನೂ ಆ ಭೂಮಿಗಳಿಗೆ ಹೋಗಲು ಸಿದ್ಧರಾಗಿ ಅರ್ಹತೆ ಪಡೆಯಬೇಕಾಗಿದೆ.

ನಾವು ಅಖಂಡತೆಯ ಭಾಗ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಋಷಿಗಳು ಮತ್ತು ವಿಶ್ವವು ತಮ್ಮದೇ ಆದ ಯೋಜನೆ ಹಾಗೂ ರೂಪರೇಷೆಗಳನ್ನು ಹೊಂದಿದ್ದು, ಪರಿಪೂರ್ಣ ಹೊಂದಾಣಿಕೆಯಲ್ಲಿದ್ದಾರೆ. ನಾವು ಋಷಿಗಳ ಕಾರ್ಯ ಕೈಗೊಂಡ ಮೇಲೆ ನಾವು ಒಂದು ವಿಶ್ವದ ಯೋಜನೆಯನ್ನು ಒಪ್ಪಿಕೊಂಡಿದ್ದೇವೆ ಎಂಬುದನ್ನು ತಿಳಿದುಕೊಂಡಿರಬೇಕು. ಈ ಭೂಮಿಯ ಮೇಲೆ ಸಾಮಾನ್ಯವೆನಿಸುವ ಸಣ್ಣ ಸಣ್ಣ ಆತಂಕಗಳು, ಅಡಚಣೆಗಳು, ನಮ್ಮ ಗಮನವನ್ನು ಬೇರೆಡೆ ಸೆಳೆಯುವಂಥ ವಿಷಯಗಳಿಂದ ನಾವು ವಿಚಲಿತರಾಗಬಾರದು. ಕೆಲವು ಸಲ ತಿಳಿಯದೆ ನಮ್ಮ ಕಾರ್ಯರೂಪರೇಷೆಗಳನ್ನು ಮುಂದೊಡ್ಡಿ ವಿಫಲರಾಗುತ್ತೇವೆ. ಅದು ಸ್ವಾಭಾವಿಕ. ಆದ್ದರಿಂದ ನಾವು ಬಹಳ ಜಾಗರೂಕರಾಗಿದ್ದು, ಪ್ರತಿದಿನ ಪರೀಕ್ಷಿಸಿ, ಆತ್ಮಾವಲೋಕನ ಮಾಡಿಕೊಳ್ಳಬೇಕು.

ಪ್ರತಿ ವಿಷಮ ಪರಿಸ್ಥಿತಿ ಒಂದು ಪರೀಕ್ಷೆ ಮತ್ತು ಸವಾಲು ಕೂಡಾ. ಅದು ಬಾಗಿಲನ್ನು ತೆರೆಯುತ್ತದೆ. ಒಮ್ಮೆ ನಾವು ವಿಷಮ ಪರಿಸ್ಥಿತಿಯನ್ನು ವ್ಯವಹರಿಸಿದ ನಂತರ ಅನೇಕ ರೀತಿಯಲ್ಲಿ ನಾವು ಪ್ರಗತಿ ಹೊಂದಿರುವುದನ್ನು ನೋಡಬಹುದು. ನಾವು ಪ್ರತಿಯೊಂದು ವಿಷಮ ಪರಿಸ್ಥಿತಿಯನ್ನು ಅತ್ಯುತ್ತಮ ಅವಕಾಶವನ್ನಾಗಿ ಮಾರ್ಪಡಿಸಿ ನಮ್ಮ ಜೀವನಕ್ಕೆ ಹೆಚ್ಚಿನ ರಂಗನ್ನು ನೀಡಬಹುದು.

ಸಮಸ್ಯೆಗಳು ನಮಗೆ ಪಾಠ ಕಲಿಸಲು ಬರುತ್ತವೆ. ನಾವು ಸಮಸ್ಯೆಯನ್ನು ಚೆನ್ನಾಗಿ ಅರ್ಥಮಾಡಿ ಕೊಂಡು ಸೂಕ್ತವಾದ ರೀತಿಯಲ್ಲಿ ವ್ಯವಹರಿಸಿದಾಗ ತಾನೇ ತಾನಾಗಿ ಅನೇಕ ಉತ್ತರಗಳು ಮತ್ತು ಪರಿಹಾರಗಳು ಸಿಗುತ್ತವೆ. ಒಂದು ಸಲ ಪಾಠ ಕಲಿತರೆ ಸಾಕು ಸಮಸ್ಯೆ ಮಾಯವಾಗುತ್ತದೆ.

ಜೀವನದಲ್ಲಿ ಅನೇಕ ಧ್ಯೇಯಗಳು, ಕೆಲಸಗಳು ಮತ್ತು ಗುರಿಗಳಿವೆ. ನಾವು ಆಯ್ಕೆಮಾಡಿಕೊಳ್ಳಬೇಕು. ನಮ್ಮ ಮೇಲೆ ಯಾವ ಒತ್ತಡಗಳೂ ಇಲ್ಲ. ಒಂದು ವೇಳೆ ನಾವು ಹಿಡಿದ ಮಾರ್ಗವನ್ನು ಬಿಟ್ಟು ಬಿಟ್ಟರೆ ನಮ್ಮನ್ನು ಯಾರೂ ನಿಂದಿಸುವುದಿಲ್ಲ, ಶಿಕ್ಷಿಸುವುದಿಲ್ಲ ಅಥವಾ ತೀರ್ಮಾನಿಸುವುದಿಲ್ಲ. ಈ ವಿಶ್ವ ಮಹೋನ್ನತವಾದುದು ಮತ್ತು ಇಲ್ಲಿ ಅಸಂಖ್ಯಾತ ಜನರು ಕೆಲಸ ಮಾಡುತ್ತಾರೆ.

ನಮ್ಮ ಮುಂದೆ ಅನೇಕ ಮಹತ್ಕಾರ್ಯಗಳಿವೆ. ಇವುಗಳನ್ನು ಕೈಗೊಳ್ಳಲು ನಾವಿನ್ನೂ ಸಿದ್ಧರಾಗಿಲ್ಲ. ಆದರೆ ಹೆಚ್ಚು ಸಮಯವಿಲ್ಲ.

**21–06– 2009**

ಋಷಿಗಳು ಈ ಮಾರ್ಗದ ಧ್ಯಾನಿಗಳಿಗೆ ರಕ್ಷಾ ಕವಚಗಳನ್ನು ನಿರ್ಮಿಸಿದ್ದಾರೆ. ವಿಶೇಷ ಗುಂಪುಗಳಲ್ಲಿರುವ ಜನರಿಗೆ ವಿಶೇಷ ಕವಚಗಳಿರುತ್ತವೆ. ಕೆಲವು ಸಲ ನಮ್ಮ ನಿಷೇಧಾತ್ಮಕ ಭಾವೋದ್ವೇಗಗಳ ಅಥವಾ ಆಲೋಚನೆಗಳ ಕಾರಣದಿಂದ ಈ ಕವಚಗಳು ಹಾನಿ ಗೊಳಗಾಗುತ್ತವೆ. ಋಷಿಗಳು ಇಂಥ ಕವಚಗಳನ್ನು

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭ ಕೆ. ರಾವ್, ಅನು: ಶಿವಪ್ರಕಾಶ್ ಎಲ್.)

ಸರಿಪಡಿಸುತ್ತಾರೆ. ವಾಸ್ತವವಾಗಿ ಋಷಿಗಳೇ ನಮ್ಮ ಕವಚಗಳು. ಋಷಿಗಳೊಂದಿಗೆ ನಮ್ಮನ್ನು ನಾವು ಅಳವಡಿಸಿಕೊಂಡಿರುವಷ್ಟು ಕಾಲವು ನಮ್ಮಲ್ಲಿ ಕವಚವಿರುತ್ತದೆ. ಈ ನಿಷೇಧತೆಗಳನ್ನು ಹೋಗಲಾಡಿಸಿಕೊಳ್ಳಲು ನಾವು ಮನಸ್ಸು ಮಾಡದೇ ಹೋದರೆ, ನಾವು ಕಪ್ಪು ಚೈತನ್ಯಗಳಿಗೆ ಬರಲು ಅವಕಾಶವಿತ್ತಂತೆ ಆಗುತ್ತದೆ. ಅವು ನಮ್ಮನ್ನು ನಾಶ ಮಾಡುತ್ತವೆ. ನಮಗೆ ತಿಳಿಯದಂತೆ ನಾವು ಕಪ್ಪು ಚೈತನ್ಯಗಳಿಗೆ ಚಾನಲ್‌ಗಳಾಗಿ ಬಿಡುತ್ತೇವೆ. ಆದ್ದರಿಂದ ನಾವು ಬಹಳ ಎಚ್ಚರವಾಗಿರಬೇಕು. ಬೆಳಕಿನಿಂದ ನಿಮ್ಮನ್ನು ನೀವು ತುಂಬಿಸಿಕೊಳ್ಳಿ. ಬೆಳಕು ಪ್ರೇಮವನ್ನು ತರುತ್ತದೆ. ಪ್ರೇಮ ಬೆಳಕನ್ನು ತರುತ್ತದೆ.

ನಾವು ಪ್ರತಿದಿನ, ಪ್ರತಿಕ್ಷಣ ನಮ್ಮ ಆಲೋಚನೆಗಳು ಭಾವೋದ್ವೇಗಗಳು ಮತ್ತು ಕೆಲಸಗಳಿಂದ ನಮ್ಮ ಭವಿಷ್ಯವನ್ನು ಸೃಷ್ಟಿಸಿಕೊಳ್ಳುತ್ತೇವೆ. ನಾವು ಜಾಗರೂಕರಾಗಿದ್ದು ಆತ್ಮಾವಲೋಕನ ಮಾಡಿ ಕೊಳ್ಳಬೇಕು. ಆಗ ಕೊರತೆಗಳು ಮತ್ತು ಬಲಗಳನ್ನು ತಿಳಿಯಬಹುದು. ಕೆಲವು ನಿಷೇಧ ಆಲೋಚನೆಗಳು ಬರಬಹುದು, ಅದು ಸ್ವಾಭಾವಿಕ. ಅದನ್ನು ಸುಮ್ಮನೆ ಅಲಕ್ಷ್ಯಮಾಡಿ. ಆದರೆ ಅದನ್ನು ಪ್ರಜ್ಞಾಪೂರ್ವಕವಾಗಿ ಸುಟ್ಟುಹಾಕಿ.

ನಾವು ಕ್ಷಮಿಸಬೇಕು. ನಾವು ದೇವರ ಅಂಶ. ನೀವು ತಪ್ಪು ಮಾಡಿದರೆ ಕ್ಷಮೆ ಕೇಳಿ. ಇನ್ನೊಬ್ಬ ವ್ಯಕ್ತಿ ಕ್ಷಮಿಸೆಂದು ಹೇಳಬಹುದು ಅಥವಾ ಹೇಳದೇ ಇರಬಹುದು, ಆದರೆ ನೀವು ಮೊದಲೇ ಸ್ವಯಂಪ್ರೇರಣೆಯಿಂದ ಮನ್ನಿಸುವುದು ಬಹಳ ಮುಖ್ಯ. ಇಂಥ ಅಸಂಖ್ಯ ಸಣ್ಣ ಸಣ್ಣ ಕಾರ್ಯಗಳು ಸಾಧನೆಯನ್ನು ರೂಪಿಸುತ್ತವೆ.

ದೀಕ್ಷೆ ಸೂಕ್ಷ್ಮರೂಪದಲ್ಲಿ ಮೊದಲು ಋಷಿಗಳೊಂದಿಗೆ ನಂತರ ದೇವರೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ದೀಕ್ಷೆ ಅನೇಕ ಲಾಭಗಳನ್ನು ಪಡೆಯಲು ಅರ್ಹತೆ ನೀಡುತ್ತದೆ. ನಮ್ಮನ್ನು ಹೆಚ್ಚು ಜವಾಬ್ದಾರಿಯುತರನ್ನಾಗಿ ಮಾಡುತ್ತದೆ. ದೀಕ್ಷೆಯ ನಂತರ ಪ್ರಪಂಚದ ಬಗ್ಗೆ ನಾವು ಯೋಚಿಸಬೇಕು. ಜನರಿಗೆ ನಮ್ಮ ಸಹಾಯ, ಮಾರ್ಗದರ್ಶನ ಮತ್ತು ಸೇವೆಗಳ ಅಗತ್ಯವಿದೆ ಎಂಬುದರ ಅರಿವಿರಬೇಕು.

ಹಳೆಯದನ್ನು ಬಿಡುವುದು ಸುಲಭವಲ್ಲ. ಹಳೆಯ ಚೈತನ್ಯಗಳು ನಮ್ಮನ್ನು ಮುನ್ನಡೆಯಲು ಬಿಡುವುದಿಲ್ಲ, ತಡೆಯುತ್ತವೆ. ಇವು ಮತ್ತು ಇತರ ಅಸಂಖ್ಯ ಸಂಗತಿಗಳಿಂದ ಮುಕ್ತರಾಗಿ ಹೊರ ಬರಬೇಕು. ಅದು ಸುಲಭವಲ್ಲ.

ನಾವು ಮೂರು ಘಂಟೆಗಳ ಕಾಲ ಧ್ಯಾನ ಮಾಡಿದರೆ ಋಷಿಗಳು ನಮ್ಮ ಶಾರೀರಿಕ ವ್ಯವಸ್ಥೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿ, ಮೂರು ವರ್ಷಗಳಲ್ಲಿ 2012ನೇ ವರ್ಷವನ್ನು ದಾಟಲು ಸಹಾಯ ಮಾಡುತ್ತಾರೆ. ಒಬ್ಬ ವ್ಯಕ್ತಿ, ಧ್ಯಾನದ ಅವಧಿಯಲ್ಲಿ ಕಾಲುಗಳ ನಿಲುವನ್ನು ಬದಲಾಯಿಸಬಹುದೆ ಎಂದು ಪ್ರಶ್ನಿಸಿದರು. ನಾನು ಹೇಳಿದೆ, ಅವರು ಏಳುವುದು ಮಾತ್ರವಲ್ಲ ಎದ್ದು ಕೋಣೆಯೊಳಗೆ ಸ್ವಲ್ಪ ಅಡ್ಡಾಡಿ ಮತ್ತೆ ಕುಳಿತುಕೊಳ್ಳಬಹುದು. ಧ್ಯಾನದ ಕಾಲದಲ್ಲಿ ಚೇತನಗೊಂಡಿರುವ ಯಾವುದೇ ವಿಧಾನವನ್ನು ನಾವು ನಿಲ್ಲಿಸುವುದಿಲ್ಲ, ಅಲ್ಲದೆ ಇವು ಭೌತಿಕ ಮಟ್ಟದಲ್ಲಿ ಮಾತ್ರವಲ್ಲ ಆಳವಾದ ಮಟ್ಟದಲ್ಲಿರುತ್ತವೆ. ಮಾನಸಿಕ ಮಟ್ಟದಲ್ಲಿ ಅತ್ಯಂತ ಪ್ರಬಲವಾದ ವಿಚಲನೆ ಮಾತ್ರ ಈ ವಿಧಾನದ ಮೇಲೆ ಪ್ರಭಾವ ಬೀರುತ್ತದೆ.

ನಾವು ಏಳು ಜನರು ಜೂನ್ ತಿಂಗಳು, ದಿನಾಂಕ 8 ರಿಂದ 14ರವರೆಗೆ, ರಾತ್ರಿ 10ರಿಂದ 1 ಘಂಟೆಯವರೆಗೆ ರಾ ಚೈತನ್ಯಗಳನ್ನು ಚಾನಲ್ ಮಾಡುವಾಗ, ಕವಿತ ಕೆಲವು ಮಹತ್ವದ ಸಂಗತಿಗಳನ್ನು ಗ್ರಹಿಸಿದಳು. ಬಹಳ ಅಮೂಲ್ಯ ಮತ್ತು ಅಪರೂಪದ ಆ ವಿಷಯಗಳನ್ನು ವಿಶ್ವಾಮಿತ್ರ ಮಹರ್ಷಿಗಳು ತಿಳಿಸಿಕೊಟ್ಟರು. ನಾನು ಈ ಮಾಹಿತಿಯನ್ನು ಮಾನಸ ಕುಟುಂಬದ ಸದಸ್ಯರಿಗೆಂದು ಒಂದು ಕಿರುಹೊತ್ತಿಗೆಯ ರೂಪದಲ್ಲಿ ಮುದ್ರಿಸಿದ್ದೇನೆ.

ಈ ಕೆಳಗೆ ಕೊಟ್ಟಿರುವ ಕೆಲವು ಅಂಶಗಳನ್ನು ನೀವು ಗಾಢವಾಗಿ ಚಿಂತನೆ ಮಾಡಬೇಕು. ಹಾಗೆ ಮಾಡಿದಾಗ ಈ ವಿಷಯಕ್ಕೆ ಸಂಬಂಧಿಸಿದಂತೆ ಹೊಸ ಜ್ಞಾನ ನಿಮಗೆ ಸಿಗುತ್ತದೆ. ಪ್ರಾಮಾಣಿಕತೆಯಿಂದ ಪ್ರತಿಯೊಬ್ಬರೂ ಪ್ರಯತ್ನಿಸಬೇಕು.

"ಬುದ್ಧಿ ಚಿಂತಿಸುತ್ತದೆ, ಮನಸ್ಸಲ್ಲ. ಇದೇ ರೀತಿ ಈಗ ನಮಗೆ ತಿಳಿದಿರುವುದೆಂದರೆ ಅರಿವು ಅಲೆದಾಡುತ್ತದೆ ಮನಸ್ಸಲ್ಲ."

"ಅರಿವು ಒಬ್ಬ ವ್ಯಕ್ತಿಯಲ್ಲಿರುವ ಬುದ್ಧಿಶಕ್ತಿಗೆ ಅಥವಾ ಒಂದು ವಸ್ತುವಿಗೆ ನಮ್ಮನ್ನು ಸಂಪರ್ಕಿಸುತ್ತದೆ. ನಂತರ ನಾವು ಅವುಗಳೊಂದಿಗೆ ವಿಚಾರ ವಿನಿಮಯ ಮಾಡಬಹುದು. ಬುದ್ಧಿಶಕ್ತಿ ಇರುವೆಡೆಯಲ್ಲಿ ಜ್ಞಾನವನ್ನು ಸಂಗ್ರಹಿಸಿಡಬಹುದು. ಈ ಗೋಡೆಗಳಲ್ಲಿ ಜ್ಞಾನವನ್ನು ಸಂಗ್ರಹಿಸಲಾಗಿದೆ. ನಾವು ಈ ಗೋಡೆಗಳೊಂದಿಗೆ ಸಂಪರ್ಕ ಸಾಧಿಸಬಹುದು.

"ನಾವು ಧ್ಯಾನ ಮಾಡುವಾಗ ಮನಸ್ಸನ್ನು ಕಾರ್ಯಮಗ್ನವಾಗಿಡಲು ಓಂ ಮಂತ್ರವನ್ನು ಉಚ್ಚರಿಸುತ್ತೇವೆ. ಚಾನಲ್ ಮಾಡುವಾಗ ನಾವು ಚಾನಲ್‌ಗಳಾಗುತ್ತೇವೆ. ಇಲ್ಲಿ ನಮ್ಮ ವೈಯಕ್ತಿಕತೆಯನ್ನು ಬಿಟ್ಟುಕೊಟ್ಟು ಶೂನ್ಯವಾಗುತ್ತೇವೆ. ಆಗ ಚೈತನ್ಯ ನಮ್ಮ ಮುಖಾಂತರ ಚಾನಲ್ ಆಗುತ್ತದೆ."

ಧ್ಯಾನಾಭ್ಯಾಸ ಮಾಡುವಾಗ ನೀವು ತಪ್ಪು ಮಾಡಿದ ಪಕ್ಷದಲ್ಲಿ ಚಿಂತೆ ಮಾಡಬೇಕಾಗಿಲ್ಲ. ಅಲ್ಲಿ ನಿಷೇಧಾತ್ಮಕ ಪ್ರತಿಕ್ರಿಯೆ ಇರುವುದಿಲ್ಲ. ದೇವರು ಪ್ರೇಮ ಮತ್ತು ಕೃಪೆಯ ಮಳೆ ಸುರಿಸುತ್ತಾನೆ. ನೀವು ಯಾರಿಗಾದರೂ ಹೇಗೆ ಧ್ಯಾನ ಮಾಡಬೇಕೆಂಬುದನ್ನು ಹೇಳಬೇಕಾದರೆ ನಮ್ಮಲ್ಲಿರುವ ಪುಸ್ತಕವನ್ನು ಪ್ರಸ್ತಾಪಿಸಬಹುದು ಮತ್ತು ಆ ವ್ಯಕ್ತಿಗೆ "ಬೆಳಕನ್ನು ಕುರಿತು ಯೋಚಿಸಿ, ಬೆಳಕನ್ನು ಅನುಭವಿಸಿ" ಎಂಬ ಮಹತ್ತಾದ ತಂತ್ರವನ್ನು ನೀಡಬಹುದು. ಬೆಳಕನ್ನು ಅನುಭವಿಸಿದಾಗ ನೀವು ಪ್ರೇಮವನ್ನು ಅನುಭವಿಸುವಿರಿ, ದೇವರನ್ನು ಅನುಭವಿಸುವಿರಿ.

ನಾವು ಭಾನುವಾರಗಳಂದು ಸೇರಿದಾಗ, ಜೀವನದ ಗುಣಮಟ್ಟದಲ್ಲಿ, ಬದುಕಿನ ಎಲ್ಲ ರಂಗಗಳಲ್ಲಿ, ಗುಣಾತ್ಮಕ ಸುಧಾರಣೆಗಳು ಬರಲೇಬೇಕು. ಪ್ರಜ್ಞಾಪೂರ್ವಕವಾಗಿ ನಾವು ಈ ಸುಧಾರಣೆಗಳುಂಟಾಗಲು ಪ್ರಯತ್ನಿಸಬೇಕು. ಅಮರರವರು ಹೇಳಿದ್ದಾರೆ: 'ಸಾವಿರ ಜನರ ನಡುವೆಯೂ, ಒಬ್ಬ ಧ್ಯಾನಿ ಎದ್ದುಕಾಣಬೇಕು.'

ಪ್ರಪಂಚ 2012ರಲ್ಲಿ ಕೊನೆಗೊಳ್ಳುವುದಿಲ್ಲ. ಇದು ಎಲ್ಲರಿಗೂ ತಿಳಿದಿದೆ. ಆದರೆ ಖಚಿತವಾಗಿ ಮಹತ್ವದ ಬದಲಾವಣೆಗಳೊಂದಿಗೆ ಜೀವನ ಮುಂದುವರಿಯುತ್ತದೆ. 2012 ನ್ನು ತಲುಪುವ ಮೊದಲೇ ಅಥವಾ ಆ ಅವಧಿಯಲ್ಲಿ ಈ ಬದಲಾವಣೆಗಳಾಗಬಹುದು. ನಮ್ಮೊಳಗೆ ಬದಲಾವಣೆಗಳು ಸಂಭವಿಸಲು ಅವಕಾಶಕೊಡಬೇಕು. ಬದಲಾವಣೆಗಳನ್ನು ತಡೆಯುವ ಜನರು ಸಮಸ್ಯೆಗಳನ್ನು ಎದುರಿಸುತ್ತಾರೆ. ಇಲ್ಲಿ ಮುಖ್ಯವಾದುದೆಂದರೆ ನಾವು ಕೆಲಸ ಮಾಡುವುದನ್ನು ಬಿಡಬಾರದು, ಕೈಗೊಂಡ ಕಾರ್ಯದಲ್ಲಿ ಮತ್ತು ಬದುಕಿನಲ್ಲಿ ನಾವು ಆಸಕ್ತಿಯನ್ನು ಕಳೆದುಕೊಳ್ಳಬಾರದು. ನಾವು ನಮ್ಮ ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ಯಾವಾಗಲೂ ಅಲಕ್ಷಿಸಬಾರದು. ❑

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂಗ್ರಹ: ವೈಶಾಲಿಜೋಶಿ; ಅನು: ಭಾಗ್ಯವತಿ

ದೇವರು ಕಣ್ಣಿಗೆ ಕಾಣುವುದಿಲ್ಲ. ನಮ್ಮ ಅವಶ್ಯಕತೆಗಳನ್ನು ಇತರರ ಮೂಲಕ ನೆರವೇರಿಸುತ್ತಾರೆ. ಆದರೆ ಕೆಲವೊಂದು ಸಮಸ್ಯೆಗಳನ್ನು ದೇವರಲ್ಲದೆ ಇನ್ನಾರೂ ನಿವಾರಿಸಲು ಸಾಧ್ಯವಿಲ್ಲ. ಇಂತಹ ಅನುಭವ ನನ್ನ ಜೀವನದಲ್ಲಿ ನಡೆದಿದೆ.

ಗುರೂಜಿಯವರು ಹೇಳುವಂತೆ, ಧ್ಯಾನದಿಂದ ನಮ್ಮ ಕಷ್ಟಗಳು ಒಣ ಎಲೆಗಳಂತೆ ಉದುರುತ್ತವೆ, ಹಾಗೂ ಕಷ್ಟಗಳು ಬಂದರೂ ಮಿಂಚಿನಂತೆ ಕರಗುತ್ತವೆಯೆಂಬ ನನ್ನ ಅನುಭವವನ್ನು ಇಲ್ಲಿ ಬರೆಯಲು ಇಚ್ಛಿಸುತ್ತೇನೆ.

ನನ್ನ ಅಕ್ಕನ ಮಗಳ ವಿವಾಹಕ್ಕೆ ಎಲ್ಲಾ ಏರ್ಪಾಡಾಗಿದ್ದು, ನನ್ನ ಭಾವನವರಿಗೆ ಹೃದಯಾಘಾತವಾಯಿತು. ಡಾಕ್ಟರರು ನಮ್ಮ ಪ್ರಯತ್ನವೆಲ್ಲ ಮುಗಿಯಿತು, ನೀವು ದೇವರ ಪ್ರಾರ್ಥನೆ ಮಾಡಿ ಎಂದು ತಿಳಿಸಿದರು. ನಾವೆಲ್ಲರೂ ಗುರೂಜಿಯವರನ್ನು ಪ್ರಾರ್ಥಿಸಿದೆವು. ಪ್ರತಿದಿನ ಧ್ಯಾನ ಹಾಗು ಪ್ರಾರ್ಥನೆಯ ಫಲವಾಗಿ ಅವರು ಕ್ರಮೇಣ ಚೇತರಿಸಿಕೊಂಡರು. ಇದು ಆಶ್ಚರ್ಯದ ಸಂಗತಿಯೇ ಆಗಿತ್ತು. —ಸೌಭಾಗ್ಯಮ್ಮ

ನಾವು ತಪೋನಗರದಲ್ಲಿ ಇದ್ದ ಸಂದರ್ಭದಲ್ಲಿ ತಾವು ನಮಗೆ ಅದೆಷ್ಟೊಂದು ಬೆಳಕು ಮತ್ತು ದೈವಶಕ್ತಿಯನ್ನು ಕೊಟ್ಟಿರುವಿರಿ. ಅದರ ಫಲವಾಗಿ ನನ್ನ ಆಧ್ಯಾತ್ಮಿಕ ಮತ್ತು ಲೌಕಿಕ ಜೀವನದಲ್ಲಿ ಅನೇಕ ಅದ್ಭುತವಾದ ಸುಧಾರಣೆಗಳನ್ನು ನೋಡುತ್ತಿರುವೆ. —ಲಿನ್ ಕರಾಟನಿ

ತಪೋನಗರಕ್ಕೆ ಸಂಬಂಧಿಸಿದ ಯಾವುದೇ ಕೆಲಸ, ಭಾಷಾಂತರ ಅಥವಾ ವಾರ್ತಾಪತ್ರಿಕೆಯ ಕೆಲಸ ಯಾವುದಾದರೂ ಸರಿ ಚಕಿತಗೊಳ್ಳುವಷ್ಟು ಶೀಘ್ರವಾಗಿ ಮುಗಿಯುತ್ತದೆ. ಏಕೆಂದರೆ ತಪೋನಗರದ ಕೆಲಸ ನನ್ನ ಎಲ್ಲ ಆದ್ಯತೆಗಳಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ನನಗೆ ಸಿಕ್ಕಿರುವ ಈ ಅವಕಾಶವನ್ನು ತಮ್ಮ ಆಶೀರ್ವಾದವೆಂದು ಭಾವಿಸುತ್ತೇನೆ. ನಾನು ಏನೇ ಮಾಡುತ್ತಿರಲಿ ನೀವು ಸದಾ ನನ್ನ ಜೊತೆಗಿರುವಂತೆ ಅನುಭವವಾಗುತ್ತದೆ. ನಿಮ್ಮ ಕೃಪೆ ನನ್ನ ಮೂಲಕ ಅದ್ಭುತಗಳನ್ನು ಮಾಡಿಸುತ್ತದೆ. ನಾನು ಕೇವಲ ಒಂದು ಸಾಧನ ಅಷ್ಟೆ. —ಪೂರ್ಣಿಮ ಪರುಳೇಕರ್

ಹೊಸದಾಗಿ ಬಿಡುಗಡೆಯಾದ ಪುಸ್ತಕಗಳಲ್ಲಿರುವ ಜ್ಞಾನ ನನ್ನನ್ನು ಸಂಪೂರ್ಣವಾಗಿ ಆಶ್ಚರ್ಯ ಚಕಿತಳನ್ನಾಗಿಸಿದೆ. ಕಿರುಪುಸ್ತಕ “ಸೆವನ್ ಡೇಸ್ ಚಾನಲಿಂಗ್ ರಾ” ಕೂಡ ಅದ್ಭುತವಾಗಿದೆ. —ಖುರ್‌ಷೀದ್ ನಾರಂಗ್

“ಬೆಳಕಿಗೆ ಬಾಗಿಲುಗಳು” ಪುಸ್ತಕ ಪರಿಶುದ್ಧವಾದ ಆನಂದ ಮತ್ತು ಹರ್ಷವನ್ನು ಹೇಗೆ ವ್ಯಕ್ತಪಡಿಸಬಹುದು ಎಂಬುದನ್ನು ನನಗೆ ತೋರಿಸಿಕೊಟ್ಟಿದೆ. ಪ್ರಶಾಂತವಾದ ಶಾಸ್ತ್ರೀಯ ಸಂಗೀತದ ಹಿನ್ನೆಲೆಯಲ್ಲಿ ನಾನು ನಿಮ್ಮ ಪುಸ್ತಕವನ್ನು ಓದಿದಾಗ, ನಿಮ್ಮ ಅನುಭವಗಳು ಮತ್ತು ಕಥನಗಳು ಸಂಪೂರ್ಣವಾದ ಬೇರೊಂದು ಆಯಾಮದ ವೈಶಿಷ್ಟ್ಯವನ್ನು ತಂದುಕೊಟ್ಟವು. ನಾನು ಪುಸ್ತಕವನ್ನು ತುಂಬಾ ನಿಧಾನವಾಗಿ, ಪ್ರತಿಯೊಂದು ಶಬ್ದದಲ್ಲೂ ನಿಲ್ಲುತ್ತಾ, ಶಬ್ದವನ್ನು ಅನುಭವಿಸುತ್ತಾ, ಪುಸ್ತಕದಲ್ಲಿದ್ದ ಚೈತನ್ಯಗಳನ್ನು ಗ್ರಹಿಸುತ್ತಾ ಓದಿದೆ. ನೀವು ಸರಳ ಭಾಷೆಯಲ್ಲಿ ವ್ಯಕ್ತಪಡಿಸಿರುವ ರೀತಿ ತುಂಬಾ ಆತ್ಮೀಯವಾಗಿದೆ. ನಿಮ್ಮನ್ನು ಗುರುವಾಗಿ ಪಡೆಯುವುದಕ್ಕೆ ನನಗಾಗಿರುವ ಸಂತೋಷ ಮತ್ತು ನನ್ನಲ್ಲಿರುವ ಕೃತಜ್ಞತೆಗಳನ್ನು ಪದಗಳಿಂದ ವ್ಯಕ್ತಪಡಿಸಲಾರೆ. —ವಿದ್ಯಾ ವೀರ್‌ಕರ್

ಯಾವಾಗಲಾದರೂ ನನಗೆ ಯಾವುದೇ ಮಾರ್ಗದರ್ಶನ ಅಥವಾ ಯಾವುದೇ ಪ್ರಶ್ನೆಗೆ ಉತ್ತರ ಬೇಕಾದರೂ ನಿಮ್ಮೊಡನೆ ಸಂಪರ್ಕ ಹೊಂದಿ ಸಂಭಾಷಿಸುವೆ. ನಾನು ನಿಮ್ಮೊಡನೆ ಮಾತನಾಡುತ್ತಿರುವಂತೆಯೂ ನೀವು ಮೌನವಾಗಿ ಕೇಳಿಸಿಕೊಳ್ಳುತ್ತಿರುವಂತೆಯೂ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳುವೆ. ಯಾವಾಗಲೂ ನನಗೆ ತಕ್ಷಣ ಅಥವಾ ಸ್ವಲ್ಪ ಸಮಯದನಂತರ ಮಾರ್ಗದರ್ಶನ ಸಿಗುತ್ತದೆ. —ಅನುರಾಧ ಪಾಟ್ಕರ್

ಇತ್ತೀಚೆಗೆ ನಾನು, ಅತ್ಯಂತ ಸೂಕ್ಷ್ಮ ಸ್ತರಗಳಲ್ಲಿ ಪ್ರಜ್ಞೆ, ಆನಂದ ಮತ್ತು ಶಾಂತಿಗಳು ಅಗಾಧವಾಗಿ ವಿಸ್ತಾರವಾಗುವುದನ್ನು ಅನುಭವಿಸುತ್ತಿರುವೆ. ಯಾವುದೇ ಚಿಂತೆಗಳಾಗಲೀ, ಸಮಸ್ಯೆಗಳಾಗಲೀ ಇಲ್ಲದ ಸಂತೋಷಕರವಾದ, ಹರ್ಷದಾಯಕ ಮತ್ತು ಶಾಂತಿಯಿಂದ ಕೂಡಿದ ಜೀವನವನ್ನು ನಡೆಸಲು ಶಕ್ತನಾಗಿದ್ದೇನೆ. —ಎ.ಎಸ್.ಪಾಟೀಲ್

ಧ್ಯಾನ ಮಾಡುವಾಗ ಆಗಾಗ ನಕ್ಷತ್ರಗಳು ನಿರಂತರವಾಗಿ ಕೆಳಗೆ ಬರುವುದನ್ನು ನೋಡುತ್ತೇನೆ. ಒಮ್ಮೆ ಅತ್ಯಂತ ಪ್ರಕಾಶಮಾನವಾದ ಬೆಳಕನ್ನು ನೋಡಿದೆ. ಮತ್ತು ನಿಮ್ಮ ಇರುವಿಕೆಯನ್ನು ಅನುಭವಿಸಿದೆ. ಒಂದು ರಾತ್ರಿ ನಾನು ತುಂಬಾ ವ್ಯಾಕುಲ ಗೊಂಡಿದ್ದೆ ಮತ್ತು ಬೆನ್ನು ಹಾಗೂ ಕಾಲುಗಳಲ್ಲಿ ತುಂಬಾ ನೋವಿತ್ತು. ನೋವನ್ನು ತಡೆಯಲಾರದೆ ನಿಮ್ಮನ್ನು ಪ್ರಾರ್ಥಿಸಿದೆ, ಆಗ ನನ್ನ ಎದೆಯ ಮೇಲೆ ಒಂದು ಬೆಳಕಿನ ಧಾರೆ ಬಿತ್ತು. ತಕ್ಷಣ ನೋವು ಕಡಿಮೆಯಾಯಿತು. —ಭಾರತೀ ಮಾತೆ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: ಕೆಲವರಿಗೆ ಅನುಭವಗಳಾತ್ತವೆ, ಬೇರೆಯವರಿಗೆ ಆಗುವುದಿಲ್ಲ ಏಕೆ?**

ಉ: ನಾನು ವ್ಯಕ್ತಿಯ ಮುಂದೆ ಕುಳಿತಾಗ ಆ ವ್ಯಕ್ತಿಗೆ ಏಕೆ ಅನುಭವಗಳಾಗುವುದಿಲ್ಲ ಎಂದು ಅರ್ಥವಾಗುತ್ತದೆ. ಪರಿಶುದ್ಧತೆ ಮತ್ತು ನಮ್ರತೆ ಅನುಭವಗಳು ಉಂಟಾಗಲು ಸಹಾಯ ಮಾಡುತ್ತವೆ.

**ಪ್ರ: ಇತ್ತೀಚಿನ ದಿನಗಳಲ್ಲಿ 2012 ಬಗ್ಗೆ ನಿಮ್ಮ ಹೇಳಿಕೆಗಳು ಎಚ್ಚರಿಕೆಯ ಸೂಚಕಗಳಾಗಿವೆ ಏಕೆ?**

ಉ: ಸತ್ಯಸಂಗತಿ ಎಂದರೆ ಸನ್ನಿವೇಶ ಭಯ ಹುಟ್ಟಿಸುವಂತಿದೆ. ನಾವು ಎಂದೂ ಈ ಬಗ್ಗೆ ಮಾತಾಡುತ್ತಿರಲಿಲ್ಲ. ಅದರ ಭೀಕರತೆಯ ಅರಿವಿರಲಿಲ್ಲ. 2012 ರಲ್ಲಿ ಏನಾಗಬಹುದು ಎಂದು ಹೆಚ್ಚು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಂತೆ ನಾವು ಸ್ವಾಭಾವಿಕವಾಗಿಯೇ ಪರಿಸ್ಥಿತಿಯನ್ನು ಎದುರಿಸಲು ಸಜ್ಜಾಗುತ್ತೇವೆ. ಹೀಗೆ ಸಜ್ಜಾಗಲು ನಾನು ಜನರನ್ನು ಜಾಗೃತಗೊಳಿಸಿ ಎಚ್ಚರಿಕೆಯಿಂದಿರುವಂತೆ ಮಾಡಬೇಕು. ಅದಕ್ಕೋಸ್ಕರ ನಾನು ಈ ವಿಷಯಗಳನ್ನು ಮತ್ತೆ ಮತ್ತೆ ಹೇಳಬೇಕಾಗುತ್ತದೆ.

**ಪ್ರ: 2012ಕ್ಕೆ ಮೊದಲು ಪರಿವರ್ತನೆಗೊಳ್ಳದವರಿಗೆ ಏನಾಗುತ್ತದೆ?**

ಉ: ನಮಗೆ ಗೊತ್ತಿಲ್ಲ. ನಾವು ಪರಿವರ್ತನೆಗೊಳ್ಳೋಣ.

**ಪ್ರ: ನಾವು ಫೋಟಾನ್ ಬೆಲ್ಟ್ ಜೊತೆ ಮಾತನಾಡಬಹುದೇ?**

ಉ: ನಾವು ಫೋಟಾನ್ ಬೆಲ್ಟ್ ಜೊತೆ ಮಾತನಾಡಬಹುದು. ನೀವು ಅದರ ಬಗ್ಗೆ ಆಲೋಚಿಸಬೇಕು ಅಷ್ಟೆ. ಆದರೆ ನೀವು ಅಂಥ ಉನ್ನತ ಅಸ್ತಿತ್ವಗಳ ಜೊತೆ ಸಂಪರ್ಕ ಸಾಧಿಸಲು ನಿಮ್ಮ ವಿಚಾರವಿನಿಮಯದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ನಿಮ್ಮಲ್ಲಿ ಚರ್ಚಿಸಲು ಅಥವಾ ಅರಿತುಕೊಳ್ಳಲು ಉನ್ನತ ವಿಷಯಗಳಿರಬೇಕು.

**ಪ್ರ: ನಾವು ವಿಶನ್‌ಗಳಲ್ಲಿ ಕಾಣುವ ಬೆಳಕು ಮತ್ತು ಚಾನಲ್ ಮಾಡುವ ಬೆಳಕು ಎರಡೂ ಒಂದೇ ಬೆಳಕೇ?**

ಉ: ಅವು ಒಂದೇ ಬೆಳಕು ಅಲ್ಲ. ಅಜ್ಞಾತದಿಂದ ಒಂದು "ದಿವ್ಯ ಬೆಳಕು" ಹೊರಹೊಮ್ಮಿತು. ಇದು ಮೊದಲ ಬೆಳಕು. ಈ ಬೆಳಕಿನಿಂದ ಎಲ್ಲವೂ ಹೊರಬಂದಿತು. ನಾವು ಚಾನಲ್ ಮಾಡುವ ಬೆಳಕು ಆ ದಿವ್ಯ ಬೆಳಕು.

**ಪ್ರ: ಮಂತ್ರವನ್ನು ಜೋರಾಗಿ ಪಠಿಸಿದಾಗ ಅದು ತುಂಬಾ ಪರಿಣಾಮಕಾರಿಯಾಗಿರುತ್ತದೆ. ನಾವು ನಿಶ್ಶಬ್ದವಾಗಿ ಪಠಿಸಿದಾಗ ಏನಾಗುತ್ತದೆ?**

ಉ: ನಿಮ್ಮ ಊಹೆ ತಪ್ಪು. ಮನಸ್ಸು ಮಂತ್ರವನ್ನು ಪಠಿಸುತ್ತದೆ. ಮನಸ್ಸು ಶಾಂತವಾಗಿದ್ದಾಗ ಹೆಚ್ಚು ಸಮರ್ಥವಾಗಿರುತ್ತದೆ. ಆದ್ದರಿಂದ ನೀವು ಮೌನವಾಗಿ ಮಂತ್ರ ಪಠಿಸಿದರೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

**ಪ್ರ: ಆತ್ಮ ಸಾಕ್ಷಾತ್ಕಾರ ಎಂದರೇನು? ದೈವ ಸಾಕ್ಷಾತ್ಕಾರ ಎಂದರೇನು?**

ಉ: ಆತ್ಮ ಸಾಕ್ಷಾತ್ಕಾರದಲ್ಲಿ ಮೊದಲು ನಾವು ದೇವರ ಒಂದು ಭಾಗ ಎಂಬ ಅರಿವು ಬರುತ್ತದೆ. ಮತ್ತು ನಾವು 'ದೇವರು' ಎಂಬ ಅರಿವು ನಮ್ಮಲ್ಲಿ ಬಂದಾಗ ಅದು ದೈವ ಸಾಕ್ಷಾತ್ಕಾರ.

**ಪ್ರ: ಧ್ಯಾನ ಪೂಜೆಗಿಂತ ಉತ್ತಮವೇ?**

ಉ: ಹೌದು. ನಾವು ಪೂಜೆ ಮಾಡುವಾಗ ನಮ್ಮ ಮನಸ್ಸಿನಲ್ಲಿ ಯಾವಾಗಲೂ ದ್ವೈತ ಭಾವನೆ ಇರುತ್ತದೆ. ನಾವು ವರ್ಷಾನುಗಟ್ಟಲೆ ಮತ್ತು ಜೀವಮಾನಗಳೇ ಪೂಜಿಸಿದರೂ ದ್ವೈತದ ಸ್ಥಿತಿ ಮುಂದುವರಿಯುತ್ತದೆ. ಆದರೆ ನಾವು ಧ್ಯಾನ ಮಾಡುವಾಗ ನಾವು ದೇವರನ್ನು ಅನುಭವಿಸುತ್ತೇವೆ. ಅದ್ವೈತದ ಸ್ಥಿತಿಯನ್ನು ತಲುಪುತ್ತೇವೆ. ನಾವು ಪೂಜಿಸುವಾಗ ಪ್ರತ್ಯೇಕ ಅಸ್ತಿತ್ವಗಳು ಉಳಿಯುತ್ತವೆ. ಧ್ಯಾನದಲ್ಲಿ ಎಲ್ಲ ಸ್ವರೂಪಗಳು ಅಳಿಯುತ್ತವೆ. ನಾವು ಧ್ಯಾನದಲ್ಲಿ ಮುಂದುವರಿದಂತೆಲ್ಲಾ ನಾವು ದೇವರು ಎಂದು ಅರಿವಾಗುತ್ತದೆ. ನಾವೇ ದೇವರಾಗುತ್ತೇವೆ. ಆದ್ದರಿಂದ ಅದಕ್ಕೇ ಧ್ಯಾನ ಪೂಜೆಗಿಂತ ಉತ್ತಮವಾದದ್ದು.

**ಪ್ರ: ಸಮಾಧಿ ಸ್ಥಿತಿಯನ್ನು ದಾಟಿದ ಪ್ರಜ್ಞೆಯ ಸ್ಥಿತಿ ಏನು?**

ಉ: ಸಮಾಧಿಯಾಚೆ ಪ್ರಜ್ಞೆಯ ಸ್ಥಿತಿ ವಿಸ್ತಾರತೆ. ನಾವು ವಿಸ್ತಾರಗೊಂಡಾಗ ದೇವರಲ್ಲಿ ಒಂದಾಗುತ್ತೇವೆ.


**ಪ್ರ: ಕೆಟ್ಟ ಆತ್ಮಗಳು ನಕಾರಾತ್ಮಕ ಕರ್ಮಗಳನ್ನು ಆಕರ್ಷಿಸುತ್ತವೆಯೇ?.**

ಉ: ದೇವರು ಆತ್ಮಗಳನ್ನು ಸೃಷ್ಟಿಸುವಾಗ ಕೆಲವನ್ನು ಕೆಟ್ಟವಾಗಿಯೂ ಸೃಷ್ಟಿಸಿರುವನು. ಅವು ಅಧೋಲೋಕಗಳಲ್ಲಿ ಬದುಕುತ್ತವೆ. ಅವುಗಳ ಸ್ವಭಾವವೇ ಕೆಟ್ಟದಾಗಿರುವುದರಿಂದ, ಅವರು ಕೆಟ್ಟದ್ದು ಮಾಡಿದಾಗ ಕೂಡ ಕರ್ಮಗಳನ್ನು ಆಕರ್ಷಿಸುವುದಿಲ್ಲ. ಆದರೆ ಅವು ಈ ಭೂಮಿಯ ಮೇಲೆ ಜನ್ಮ ತಳೆದಾಗ ಇಲ್ಲಿಯ ಕರ್ಮಗಳ ನಿಯಮಗಳನ್ನು ಅನುಸರಿಸಬೇಕು. ಆಗ ಅವು ಕೂಡ ನಿಷೇಧಾತ್ಮಕ ಕರ್ಮಗಳನ್ನು ಆಕರ್ಷಿಸುತ್ತವೆ.


## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 120/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| - ಧ್ಯಾನ ಮಾಡುವುದು ಹೇಗೆ | |
| - ಧ್ಯಾನ ಯೋಗ | |
| - ಆತ್ಮದ ಅವರೋಹಣ | |
| - ಶಂಬಲ ನಿಯಮಗಳ ಅಭ್ಯಾಸ | |
| - ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| ஒளியில் வாழ்க்கை | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



**ಗುರೂಜಿ ಕೃಷ್ಣಾನಂದ (1939)**

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯುವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

## ಆಧ್ಯಾತ್ಮಿಕ ಅನುಭವಗಳು

**(ಸಂಗ್ರಹ: ಶೋಭ ಕೆ.ರಾವ್, ಅನು: ಸ್ವರ್ಣಲತ)**

ನಾನು ಚಾನಲಿಂಗ್ ಮಾಡುತ್ತಿದ್ದಾಗ ನಮ್ಮ ಭೂಮಿ ಆ ಬೆಳಕನ್ನು ಪಡೆದು, ಅದು ಸಂತೋಷವಾಗಿರುವಂತೆ ನನಗನಿಸಿತು. ನಾನು ಭೂದೇವಿಯೊಂದಿಗೆ ಮಾತನಾಡಿದೆ. ಮಾನವಕುಲದ ಪ್ರಜ್ಞೆ ಉನ್ನತ ಮಟ್ಟಕ್ಕೆ ಏರುತ್ತಿರುವುದಕ್ಕೆ ಆಕೆ ಸಂತೋಷವನ್ನು ವ್ಯಕ್ತಪಡಿಸಿದಳು. ಫೋಟಾನ್ ಬೆಲ್ಟ್‌ನ ಚೈತನ್ಯಗಳಿಂದ ಜನರು ತೊಂದರೆಗೆ ಒಳಗಾಗುವುದನ್ನು ತಪ್ಪಿಸಲು ಸಾಧ್ಯವೇ ಎಂದು ಆಕೆಯನ್ನು ಕೇಳಿದೆ. ಅದಕ್ಕೆ ತಾನು ಯಾರನ್ನೂ ರಕ್ಷಿಸಲು ಆಗುವುದಿಲ್ಲ ಎಂದು ತಿಳಿಸಿದಳು. ಮತ್ತು ಆ ಎಲ್ಲಾ ಪ್ರಕ್ರಿಯೆಗಳನ್ನು ಋಷಿಗಳು ಗಮನಿಸುತ್ತಿರುವರೆಂದೂ, ಇನ್ನು ಮುಂದೆ ದುಷ್ಟ ಜನ ಈ ಭೂಮಿಯ ಮೇಲೆ ವಾಸಿಸಲು ಆಗುವುದಿಲ್ಲವೆಂದೂ ತಿಳಿಸಿದಳು.

'ಶ್ರೀರಾಮನವಮಿ'ಯಂದು ಶ್ರೀರಾಮನಿಗೆ ಚೈತನ್ಯಗಳನ್ನು ಅರ್ಪಿಸಿದಾಗ, ನನ್ನಲ್ಲಿರುವ ಬೆಳಕಿನ ಕಡೆ ಗಮನ ಕೊಡುವಂತೆ ಶ್ರೀರಾಮ ತಿಳಿಸಿದ. ಅಂದಿನಿಂದ ನನ್ನ ಹೃದಯದಲ್ಲಿ ಓಂಕಾರದ ಮಿಡಿತ ಕೇಳಿಬರುತ್ತಿದೆ. ಅದು ನನ್ನ ಆತ್ಮದ ಬೆಳಕಿನ ಅರಿವನ್ನು ನನ್ನಲ್ಲಿ ಮೂಡಿಸಿದೆ. ಸಂತೋಷದ ತೊರೆಯೇ ನನ್ನಿಂದ ಹೊರಹೊಮ್ಮುವ ಅನುಭವವಾಗುತ್ತಿದೆ. —ಅರ್ಚನಾ

ಬುದ್ಧ ಪೂರ್ಣಿಮೆಯಂದು ನನ್ನ ಸೂಕ್ಷ್ಮ ಶರೀರ ಪ್ರಯಾಣದಲ್ಲಿ ವೈಶಾಖ ಕಣಿವೆ ಹಿಮಾಚ್ಛಾದಿತ ಪರ್ವತಗಳಿಂದ ಆವೃತವಾಗಿರುವುದನ್ನು ನೋಡಿದೆ. ಋಷಿಗಳು ಬುದ್ಧನನ್ನು ಆವಾಹಿಸಿದರು. ಆಗ ಅವನು ಬೆಳಕಿನಿಂದ ಹೊರಬಂದನು. ಅವನು ಬಂಗಾರದ ಬಣ್ಣದಿಂದ ರಾರಾಜಿಸುತ್ತಿದ್ದನು ಮತ್ತು ಬಿಳಿಯ ಬೆಳಕನ್ನು ಹೊರಸೂಸುತ್ತಿದ್ದನು. ಅಲ್ಲಿದ್ದ ಪ್ರತಿಯೊಬ್ಬರೊಡನೆ ಬುದ್ಧನು ಸಂಭಾಷಿಸಿದನು. ಅಲ್ಲಿ ಅಮರರವರು, ಗುರೂಜಿಯವರು ಹಾಗೂ ಇನ್ನೂ ಅನೇಕ ಸೂಕ್ಷ್ಮಜೀವಿಗಳನ್ನು ನಾನು ನೋಡಿದೆ. ಕೆಲವು ದುಷ್ಟ ಜನರು ನಾವಿದ್ದ ಸ್ಥಳಕ್ಕೆ ಬರಲು ಪ್ರಯತ್ನಿಸುತ್ತಿದ್ದರು. ಆದರೆ ಅವರು ಬೆಳಕಿನ ಪರಿಧಿಯ ಹೊರಗೇ ಉಳಿದಿದ್ದರು.

ಒಂದುಸಾರಿ ಬೆಳಕು 'ಫೋಟಾನ್ ಬೆಲ್ಟ್' ಒಬ್ಬ ಪುರುಷ ಎಂದು ತಿಳಿಸಿತು. ಫೋಟಾನ್ ಬೆಲ್ಟ್ ಈ ರೀತಿ ನನಗೆ ಹೇಳಿತು, "21–12–2012ರ ಬೆಳಿಗ್ಗೆ 11ಗಂಟೆ 11ನಿಮಿಷಕ್ಕೆ ಸೂರ್ಯರು, ಭೂಮಿ ಮತ್ತು ಗ್ಯಾಲಕ್ಸಿಯ ಕೇಂದ್ರ ಒಂದೇ ಸರಳರೇಖೆಯಲ್ಲಿ ಬರುತ್ತವೆ. ಇದು ಭೂಮಿಯ ಮತ್ತು ಸೂರ್ಯನ ಕಾಂತಕ್ಷೇತ್ರದಲ್ಲಿ ವಿರುದ್ಧ ಪರಿಣಾಮವನ್ನು ಉಂಟುಮಾಡುವುದರಿಂದ ಈ ಭೌತಿಕ ಮಟ್ಟದಲ್ಲಿ ಕೂಡ ಕೆಲವು ಬದಲಾವಣೆಗಳಾಗುತ್ತವೆ. ಮನುಷ್ಯರ ದುಷ್ಟಕೃತ್ಯಗಳಿಗೆ ಭೂಮಿಯು ಪ್ರತಿಕ್ರಿಯಿಸುತ್ತದೆ. ಭೂಮಿ ನನ್ನನ್ನು ಪ್ರವೇಶಿಸುವುದು ಮತ್ತು ಅದೇ ದಿನ ಗ್ಯಾಲಕ್ಸಿಯ ಸಮ್ಮಿಲನ ಆಗಬೇಕೆಂಬುದು ಸೃಷ್ಟಿಕರ್ತನ ಅಭಿಲಾಷೆ." 2012ರ ನಂತರ ಜನರು ಹೇಗಿರುವರೆಂಬುದರ ಒಂದು ಚಿತ್ರಣವನ್ನು ಫೋಟಾನ್ ಬೆಲ್ಟ್ ತೋರಿಸಿತು. ಆ ಚಿತ್ರಣದಲ್ಲಿ, ಬೆಳಕನ್ನು ಆಯ್ಕೆ ಮಾಡಿ ಕೊಂಡವರೆಲ್ಲಾ, ಶಂಬಲದ ಜನರಂತೆ ಉನ್ನತ ತರಂಗಾಂತರದಲ್ಲಿ ವಾಸಿಸುತ್ತಿದ್ದರು. ಉಳಿದವರು ಕಡಿಮೆ ತರಂಗಾಂತರದಲ್ಲಿದ್ದರು. ಆ ಎರಡೂ ಗುಂಪಿನ ಜನರಲ್ಲಿ ಯಾವುದೇ ಸಂಬಂಧ ಇರಲಿಲ್ಲ.

"ನೀವು ಪರಿಶುದ್ಧರಾಗಿ, ಎಚ್ಚೆತ್ತುಕೊಳ್ಳಿ, ತೆರೆದ ಹೃದಯಿಗಳಾಗಿ. ನಿಮಗೆ ಸಹಾಯಮಾಡಲು ನಾನಿದ್ದೇನೆ. ನಿಮ್ಮ ಪ್ರಜ್ಞೆಯ ಮಟ್ಟವನ್ನು ಉನ್ನತಮಟ್ಟಕ್ಕೆ ಏರಿಸಲು ನಾನಿದ್ದೇನೆ" ಎಂದು ಫೋಟಾನ್ ಬೆಲ್ಟ್ ಮತ್ತೆ ಮತ್ತೆ ಹೇಳಿತು. ಅದು ನನಗೆ ನೀಲಿ ಚೈತನ್ಯಗಳನ್ನು ಹರಸಿತು.

—ಪ್ರಿಯಾಂಕ ಮಿಶ್ರ.

ನನಗೆ ಒಂದು ವಿಚಿತ್ರವಾದ ಸೂಕ್ಷ್ಮ ಪ್ರಯಾಣದ ಅನುಭವವಾಯಿತು. ಬೆಳ್ಳಿಯ ಬಣ್ಣದ ಒಂದು ತಟ್ಟೆಯಾಕಾರದ ಯು.ಎಫ್.ಒ. ನಮ್ಮ ಭೂಮಿಯನ್ನು ತಲುಪಿತು. ಅದರ ಕೆಳಭಾಗದ ಮಧ್ಯದಲ್ಲಿ ಒಂದು ದೊಡ್ಡರಂಧ್ರದಿಂದ ಬಿಳಿಯ ಬೆಳಕು ಕಾಣಿಸುತ್ತಿತ್ತು. ಅಪರಿಚಿತ ಮೆಲು ಧ್ವನಿಗಳು ಕೇಳಿಬರುತ್ತಿದ್ದವು. ಅದು ನಮ್ಮ ಭೂಮಿಯನ್ನು ತಲುಪಿದ ನಂತರ, ಅದರಿಂದ ಅನ್ಯಗ್ರಹ ಜೀವಿಗಳು ಹೊರಬಂದು ನಮ್ಮ ಭೂಮಿಯ ಮನುಷ್ಯರನ್ನು ಕೊಲ್ಲಲು ಪ್ರಾರಂಭಿಸಿದರು. ಅವರು ಲೇಸರ್ ಗನ್ನಿನಂತಹ ಆಯುಧಗಳನ್ನು ಬಳಸುತ್ತಿದ್ದರು. ನಮ್ಮ ಜನರು ಭಯದಿಂದ ದೂರ ಓಡಲು ಪ್ರಯತ್ನಿಸುತ್ತಿದ್ದರು. ಮರುದಿನ ಆ ಹಿಂಸಾಚಾರ ನಿಂತಿತು. ಆದರೆ ಕೆಲವೇ ಜನರು ಮಾತ್ರ ಬದುಕುಳಿದು ಮನೆಗಳೆಲ್ಲಾ ಬರಿದಾಗಿದ್ದವು. ವಿದ್ಯುತ್ ಕಡಿತದಿಂದಾಗಿ ಮನೆಗಳೆಲ್ಲಾ ಕತ್ತಲಿನಿಂದ ತುಂಬಿದ್ದವು. ಅಳುತ್ತಿರುವ ಕೆಲವು ಮಕ್ಕಳನ್ನು ಮಾತ್ರ ಕಾಣಬಹುದಾಗಿತ್ತು. ಎಲ್ಲೆಲ್ಲೂ ವಿನಾಶವೇ ಕಾಣುತ್ತಿತ್ತು. ನಾನು ಎಲ್ಲಾ ಧ್ಯಾನಿಗಳನ್ನು ನೋಡಿದೆ, ಅವರೆಲ್ಲಾ ಸುರಕ್ಷಿತವಾಗಿದ್ದರು.

—ಸಲೀಲ್ ಕಾರ್ಖಾನಿಸ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ